**ದಿನಾಂಕಃ 11.11.2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ. ಆರ್ ಎಸ್ ಜಿ ವಕೀಲರಿಂದ**

ನನ್ನ ಮುಖ್ಯವಿಚಾರಣೆಯ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ . ಅದರಲ್ಲಿನ ಸಂಗತಿಗಳೆಲ್ಲ ಸತ್ಯವಿದ್ದು ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಪ್ರಮಾಣ ಪತ್ರವನ್ನು ನನ್ನ ಮುಖ್ಯವಿಚಾರಣೆಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ.

ಅರ್ಜಿದಾರನಿಗೆ ಸಂಬಂಧಪಟ್ಟ ಹೊರರೋಗಿ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-194 ಎಂದು ಗುರುತಿಸಲಾಯಿತು. ಅರ್ಜಿದಾರನಿಗೆ ಸಂಬಂಧಪಟ್ಟ ಅಂಗನ್ಯೂನ್ಯತೆ ಪ್ರಮಾಣಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-195 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ನಿಪಿ-195(ಎ) ಎಂದು ಗುರುತಿಸಲಾಯಿತು. ಅರ್ಜಿದಾರನಿಗೆ ಸಂಬಂಧಪಟ್ಟ ಎಕ್ಸರೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-196 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಎದುರುದಾರ ಪರ ಶ್ರೀ. ಎಸ್ ಟಿ ಕೆ ವಕೀಲರಿಂದ**

ನಾನು ದಾವಣಗೆರೆಯ ಯಸಸ್ ಆಸ್ಪತ್ರೆಯಲ್ಲಿ ಪ್ಲಾಸ್ಟಿಕ್ ಸರ್ಜರಿ ವಿಭಾಗದಲ್ಲಿ ವೈದ್ಯನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಅರ್ಜಿದಾರರು ಒಂದು ಬಾರಿ ಮಾತ್ರ ನನ್ನ ಬಳಿ ಬಂದು ಹೊರರೋಗಿಯಾಗಿ ಚಿಕಿತ್ಸೆ ಪಡೆದಿದ್ದರು. ಅರ್ಜಿದಾರರು ತನ್ನ ಅಂಗನ್ಯೂನ್ಯತೆ ಪ್ರಮಾಣಪತ್ರ ಪಡೆಯುವ ಸಲುವಾಗಿ ಮಾತ್ರ ನನ್ನ ಬಳಿ ಬಂದಿದ್ದರು . ನಾನು ಅಂಗನ್ಯೂನ್ಯತೆ ಪ್ರಮಾಣಪತ್ರ ನೀಡುವ ಸಂದರ್ಭದಲ್ಲಿ ಅರ್ಜಿದಾರನಿಗೆ ಸಂಬಂಧಪಟ್ಟ ಡಿಸ್ಚಾರ್ಜ ಸಮರಿಯನ್ನು ಮಾತ್ರ ನೋಡಿರುತ್ತೇನೆ ಕೇಸು ಶೀಟನ್ನು ನೋಡಿರುವುದಿಲ್ಲ. ನಾನು ಅಂಗನ್ಯೂನ್ಯತೆ ಪ್ರಮಾಣಪತ್ರ ನೀಡುವ ಸಂದರ್ಭದಲ್ಲಿ ಕೇಸು ಶೀಟು ಬಹಳ ಮುಖ್ಯ ದಾಖಲೆಯಾಗಿದ್ದು ಅದನ್ನು ನಾನು ನೋಡಿರುವುದಿಲ್ಲ. ನಾನು ಅರ್ಜಿದಾರರ ಮೂಲಕವು ಸಹ ಕೇಸು ಶೀಟನ್ನು ಪಡೆದು ಪರಿಶೀಲನೆ ಮಾಡಿ ಅಂಗನ್ಯೂನ್ಯತೆ ಪ್ರಮಾಣಪತ್ರವನ್ನು ನೀಡಲು ಪ್ರಯತ್ನಿಸಿರುವುದಿಲ್ಲ ನಾನು ಚಿಕಿತ್ಸೆ ನೀಡಿದ ಬಗ್ಗೆ ಪ್ರತ್ಯೇಕ ದಾಖಲೆಯಲ್ಲಿ ನಮೂದು ಮಾಡಿರುತ್ತೇನೆ ಅದರೆ ದಾಖಲೆಯನ್ನು ಇಂದು ನನ್ನ

ಜೊತೆ ತಂದಿರುವುದಿಲ್ಲ. ಆ ದಾಖಲೆಯನ್ನು ಅಂಗನ್ಯೂನ್ಯತೆ ಪ್ರಮಾಣಪತ್ರದ ಜೊತೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಈಗ ತೋರುತ್ತಿರುವ ಎಕ್ಸರೆ ಪ್ರಕಾರ ಗಾಯಾಳುವಿಗೆ ಆದ ಗಾಯಗಳಿಗೆ ಸಂಬಂಧಪಟ್ಟಂತೆ ಸ್ಕ್ರೂ ಮತ್ತು ಪ್ಲೇಟುಗಳನ್ನು ಅಳವಡಿಸಿದ್ದು ಅವುಗಳನ್ನು ಹೊರತೆಗೆಯದೇ ಇನ್ನೂ ಸಂಪೂರ್ಣವಾಗಿ ಗಾಯಾಳು ಗುಣಮುಖವಾಗಿಲ್ಲ ಎಂದರೆ ಸರಿ. ಗಾಯಾಳು ಇನ್ನೂ ಸಹ ಚಿಕಿತ್ಸೆ ಪಡೆಯುತ್ತಿರುವ ಸಂದರ್ಭದಲ್ಲಿ ಆತನ ಅಂಗನ್ಯೂನ್ಯತೆ ನಿರ್ಧರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಸಂಬಂಧಿಸಿದ ಅಂಗನ್ಯೂನ್ಯತೆ ಇಡೀ ದೇಹಕ್ಕೆ ಹೋಲಿಸಿದಾಗ ¼ ಕಡಿಮೆಯಾಗುತ್ತದೆ ಎಂದರೆ ಸರಿ. ನಾನು ಅರ್ಜಿದಾರನಿಗೆ ಸಂಬಂಧಪಟ್ಟ ಅಂಗನ್ಯೂನ್ಯತೆ ಪ್ರಮಾಣಪತ್ರದಲ್ಲಿ ಹೇಳಲಾದ ಪ್ರಮಾಣದಲ್ಲಿ ಅಂಗನ್ಯೂನ್ಯತೆ ಉಂಟಾಗದೇ ಇದ್ದರೂ ಸಹ ಅರ್ಜಿದಾರನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ತೋರುತ್ತಿರುವ ಎಕ್ಸರೆಯಲ್ಲಿ ಅರ್ಜಿದಾರರ ಎಡಗೈನ ಮೂಳೆ ಡೊಂಕಾಗಿ ಕೂಡಿಕೊಂಡಿರುತ್ತದೆ. ಅರ್ಜಿದಾರರಿಗೆ ಆದ ಗಾಯಗಳು ಕೂಡಿಕೊಂಡು ಸಂಪೂರ್ಣವಾಗಿ ಗುಣಮುಖವಾಗಿದ್ದರೂ ಸಹ ಡೊಂಕಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ